# ಬಾಪು ಜೀವನಚಿತ್ರ

ಮಹಾತ್ಮ ಗಾಂಧಿಯವರ ಪತ್ನಿ ಕಸ್ತೂರಬಾ ಕುರಿತ ಜೀವನ ಚರಿತ್ರೆಯಿದು. ಇದರ ವಿಶೇಷತೆಯೆಂದರೆ ಕಸ್ತೂರ್ ಬರೆದುಕೊಂಡ ಆತ್ಮಕಥೆಯ ವಿನ್ಯಾಸದಲ್ಲಿರುವುದು. ಬೇರೊಬ್ಬರ ಪರಕಾಯ ಪ್ರವೇಶ ಮಾಡಿ ಕಾಲಪ್ರವಾಹದಲ್ಲಿ ಹಿಮ್ಮೊಗವಾಗಿ ಚಲಿಸಿ ಅವರ ಜೀವನ ಚರಿತ್ರೆಯನ್ನು ಕಟ್ಟಿಕೊಡುವ ಈ ವಿಧಾನ ಮರಾಠಿಯಲ್ಲಿ ಜನಪ್ರಿಯ. ಕನ್ನಡದಲ್ಲಿ ಅಷ್ಟಾಗಿಲ್ಲ. ಈ ಕಥನಕ್ರಮವನ್ನು ಅನುಪಮಾ ಚೆನ್ನಾಗಿ ನಿಭಾಯಿಸಿದ್ದಾರೆ. ಈ ಕಥನ ತಂತ್ರವು, ಸಾಮಾನ್ಯ ಗೃಹಿಣಿಯ ಮೂಲಕ ಸಾರ್ವಜನಿಕ ಮಹತ್ವದ ವ್ಯಕ್ತಿಯಾದ ಗಾಂಧಿಯವರನ್ನು, ರಾಷ್ಟ್ರೀಯ ಚಳವಳಿಯನ್ನು ನೋಡುವ ಮತ್ತು ಬೆಲೆಗಟ್ಟುವ ಕೆಲಸವನ್ನು ಮಾಡಿದೆ. ಹೀಗಾಗಿಯೇ ಇದು ಏಕಕಾಲಕ್ಕೆ ಹೆಣ್ಣೊಬ್ಬಳ ತಾಕಲಾಟಗಳ ಸ್ವಗತವೂ ಗಾಂಧಿ ಕುಟುಂಬದ ಕಥೆಯೂ ನಾಡಿನ ಚರಿತ್ರೆಯೂ ಆಗಿದೆ. ಸಾಂಪ್ರದಾಯಿಕ ಚರಿತ್ರೆಯು ಬೃಹತ್ ಘಟನೆಗಳ ಮೂಲಕ ಕಾಲಾನುಕ್ರಮದಲ್ಲಿ ಗತವನ್ನು ಗ್ರಹಿಸುತ್ತದೆ. ಆದರೆ ಇಂಥ ಕಥನಗಳು ವ್ಯಕ್ತಿಯ ಖಾಸಗಿ ಅನುಭವಗಳ ಮೂಲಕ ಲೋಕವನ್ನು ಗ್ರಹಿಸುತ್ತವೆ. ಸಾಂಪ್ರದಾಯಿಕ ಚರಿತ್ರೆ ಸಾಮಾನ್ಯವಾಗಿ ಗಂಡುಕೇಂದ್ರಿತ. ಇಂಥ ಕಥನಗಳು ಅಂಚಿನಲ್ಲಿರುವ ವ್ಯಕ್ತಿಯ ಮೂಲಕ ಲೋಕವನ್ನು ನೋಡುತ್ತವೆ. ಈ ಹಿನ್ನೆಲೆಯಲ್ಲಿ ಈ ಕಥನವು ಚರಿತ್ರೆಯನ್ನು ದೈನಿಕ ಬದುಕಿನ ಸಣ್ಣಪುಟ್ಟ ಸಂಗತಿ, ಜಂಜಾಟ ಹಾಗೂ ಮನುಷ್ಯ ಸಂಬಂಧಗಳ ಮೂಲಕ ಕಟ್ಟಿಕೊಡುತ್ತದೆ. ಈ ಕಾರಣದಿಂದ ಇದು ಪ್ರತಿಚರಿತ್ರೆಯಾಗಿದೆ. ಕಸ್ತೂರಬಾರ ಆತ್ಮಕಥನದ ವಿನ್ಯಾಸವಿದ್ದರೂ ಇದು ಗಾಂಧಿಯವರ ಜೀವನಚಿತ್ರವೇ. ಇಲ್ಲಿ ಗಾಂಧಿಯನ್ನು ನಿರಾಕರಿಸುವ ಮತ್ತು ವೈಭವೀಕರಿಸುವ ಬದಲಿಗೆ, ಅವರ ತಪ್ಪುಗಳನ್ನು ವಿಮರ್ಶೆ ಮಾಡುತ್ತಲೇ ದೊಡ್ಡತನವನ್ನು ಗುರುತಿಸುವ ವಿಧಾನವಿದೆ. ತಣ್ಣನೆಯ ಧ್ಯಾನಸ್ಥವಾದ ರೀತಿಯಲ್ಲಿ ಗೃಹಿಣಿಯೊಬ್ಬಳು ತಾನು ಹಾಗೂ ತನ್ನ ಗಂಡನೂ ಬಾಳಿದ ತಪ್ಪೆಸಗಿದ ಹಾಗೂ ಮಾಗಿದ ಬಗೆಯನ್ನು ಕಟ್ಟಿಕೊಡುತ್ತದೆ. ಇಲ್ಲಿನ ಅನುಭವ ನಿರೂಪಣೆ ಅಕ್ಕ ತನ್ನ ಮನದ ಮಾತುಗಳನ್ನು ಸಖಿಯ ಜತೆ ಹೇಳಿಕೊಳ್ಳುವಂತೆ ಆಪ್ತವಾಗಿದೆ. ಗಾಂಧಿಯನ್ನು ಹೆಂಗಳೆತನವುಳ್ಳ ವ್ಯಕ್ತಿಯೆಂದು ಈಗಾಗಲೇ ಅನೇಕ ಚಿಂತಕರು ಕರೆದಿದ್ದಾರೆ. ಆದರೆ ಅಂಥ ವ್ಯಕ್ತಿಯೊಳಗೂ ಇದ್ದ ಕಠೋರತೆಯನ್ನು ಈ ಕಥನ ಬಿಚ್ಚಿಡುತ್ತದೆ. ಇದು ಪ್ರಧಾನಧಾರೆಯ ಚರಿತ್ರೆಯ ಬುಕ್ಕಿನ ಖಾಲಿಬಿಟ್ಟ ಹಾಳೆಗಳಲ್ಲಿ ಮಾಡಿದ ಬರಹದಂತಿದೆ. ಇಲ್ಲಿನ ಭಾಷೆ ಸರಳವಾಗಿವೆ. ಕಾವ್ಯಾತ್ಮಕವಾಗಿದೆ. ನಿರೂಪಣಕ್ರಮ ಕಥೆಯಂತೆ ಸರಾಗವಾಗಿದೆ. ಸ್ತ್ರೀಸಂವೇದನೆಯ ದಿಟ್ಟಿಯಿಂದ ಚರಿತ್ರೆಯನ್ನು ಮಾತ್ರವಲ್ಲ ವರ್ತಮಾನವನ್ನು ನೋಡುವುದಕ್ಕೆ ಇದು ಪ್ರೇರೇಪಿಸುತ್ತದೆ. ಈ ಅರ್ಥದಲ್ಲಿದು ಈಗಿಲ್ಲವಾಗಿರುವ ಕಸ್ತೂರರ ಕಥನವಲ್ಲ, ಭಾರತದ ಬಹುತೇಕ ಮಹಿಳೆಯರ ಕಥನವೂ ಆಗಿದೆ.




ನಾನು ಕಸ್ತೂರ್
(ಕಸ್ತೂರಬಾ ಜೀವನ ಕಥನ)
ಲೇ: ಎಚ್.ಎಸ್. ಅನುಪಮಾ
ಪ್ರ: ಲಡಾಯಿ ಪ್ರಕಾಶನ,
ಧಾರವಾಡ

● **ರಹಮತ್ ತರೀಕೆರೆ**